ಅಸಲು ದಾವೆ ನಂಃ 346/2017 ಡಿ.ಡಬ್ಲ್ಯೂಃ1- ಕುಸುಮ್ಮವ್ವ ರೋಖಡೆ

<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 08/07/2024 ರಂದು ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ **SVC** ವಕೀಲರಿಂದಃ</u>

VPC 1445 ನನ್ನ ಗಂಡ(1 ನೇ ಪ್ರತಿವಾದಿ) ವಿರುಪಾಕ್ಷಯ್ಯ ಮಲ್ಲಯ್ಯ ಹಿರೇಮಠ ಇವರ ಕಡೆಯಿಂದ ಖರೀದಿ ಹಿಡಿದರು ಎಂದರೆ ನಿಜ. ಸುಮಾರು 20 ವರ್ಷಗಳ ಹಿಂದೆ ಖರೀದಿ ಮಾಡಿದ್ದಾರೆ. ಚಳ್ಳಪ್ಪ ಶ್ರೀಪಾದಪ್ಪ ರೋಖಡೆ ಇವರು ವಿರುಪಾಕ್ಷಯ್ಯ ಮಲ್ಲಯ್ಯ ಹಿರೇಮಠ ಇವರಿಂದ ದಿನಾಂಕ 28/07/2006 ರಂದು ಸದರಿ ಆಸ್ತಿಯನ್ನು ಖರೀದಿ ಹಿಡಿದರು ಎಂದರೆ ನಿಜ. ಆ ಖರೀದಿ ಪತ್ರವನ್ನು ಈಗ ವಾದಿ ಪರ ವಕೀಲರು ತೋರಿಸಲಾಗಿ, ಸಾಕ್ಷಿ ಸದರಿ ಖರೀದಿ ಪತ್ರವನ್ನು ಒಪ್ಪಿ ಕೊಂಡಿರುತ್ತಾರೆ. ಸದರಿ ಖರೀದಿ ಪತ್ರವನ್ನು ನಿಪಿ-20 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸರ್ವೇ ನಂಬರ 443 ರಲ್ಲಿ ಎರಡು ಗುಂಟೆಯನ್ನು ಖರೀದಿ ಮಾಡಿದ್ದರು ಎಂದರೆ ನಿಜ. ಅದು ನಂತರ VPC 1445 ಎಂದು ಆಯಿತು ಎಂದರೆ ನಿಜ. VPC 1445 ಇದರ ಚೆಕ್ ಬಂದಿ ಹೇಳಲು ಬರುವುದಿಲ್ಲ. ಖರೀದಿ ಸಮಯದಲ್ಲಿ ಎರಡು ಗುಂಟೆಯ ಸುತ್ತಲು ಹೊಲಗಳು ಇದ್ದವು ಎಂದರೆ ನಿಜ. VPC ನಂಬರ ಆದ ನಂತರ ಅದರ ಚೆಕ್ ಬಂದಿ ಬೇರೆಯಾಯಿತು ಎಂದರೆ ನಿಜ. VPC 1445 ಇದರ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ಅರವಿಂದ್ ರಾಮಚಂದ್ರಪ್ಪ ಶಾಂತಗೇರಿ ಇವರ ಖಾಲಿ ಜಾಗ, ಉತ್ತರಕ್ಕೆಃ ಕಲ್ಲಪ್ಪ ಬಸಪ್ಪ ಜಾಲಿಹಾಳ ಇವರ ಮನೆ, ದಕ್ಷಿಣಕ್ಕೆಃ ಸರಕಾರಿ ರಸ್ತೆ ಇದೆ ಎಂದರೆ ನಿಜ. ನನ್ನ ಗಂಡ ನೀರಾವರಿ ಆಫೀಸ್ ನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಎಸ್ ಎಸ್ ಎಲ್ ಸಿ ಓದಿದ್ದ. VPC 1445 ನನ್ನ ಗಂಡನ ಸ್ವಂತ ಆಸ್ತಿ ಎಂದರೆ ನಿಜ. ಅವನ ಸ್ವಂತ ಆಸ್ತಿಯನ್ನು ಬೇರೆ ಯಾರಿಗೂ ಆತ ಕೊಡಬಾರದು. ನನ್ನ ಗಂಡನಿಗೆ 5 ಎಕರೆಗೆ ಆಸ್ತಿ ನವಲಗುಂದದ ಹತ್ತಿರ ಇರುವ ಗುಡಿಸಾಗರ ಗ್ರಾಮದಲ್ಲಿ ಇದೆ. ದಾವಾ ಆಸ್ತಿ ಹಿರೇಹಾಳದಲ್ಲಿ ಇದೆ. ದಿನಾಂಕ 25/02/2011 ರಂದು ನನ್ನ ಗಂಡ VPC 1445 ಆಸ್ತಿಯನ್ನು ನೀಲಪ್ಪ ಮೈಲಾರಪ್ಪ ಮಲ್ಲನಗೌಡ್ರ ಇವರಿಗೆ ಖರೀದಿ ಕೊಟ್ಟರು ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ವಾದಿ ಕೇಸ್ ಹಾಕಿದ ನಂತರ ಈ ಖರೀದಿ ವ್ಯವಹಾರದ ಬಗ್ಗೆ ಗೊತ್ತಾಯಿತು. ಖರೀದಿ ವ್ಯವಹಾರದ ನಂತರ ನಾನು ವಾದಿ ಖರೀದಿ ಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎಂದು ಪೊಲೀಸಿ ದೂರು ಕೊಟ್ಟಿಲ್ಲ. 2011 ಕ್ಕಿಂತ ಮುಂಚಿತವಾಗಿ ಸದರಿ ಆಸ್ತಿ ನನ್ನ ಗಂಡನ ಹೆಸರು ಉತಾರದಲ್ಲಿ ಇತ್ತು. ನಿಪಿ-1 ಉತಾರವನ್ನು ನೋಡುತ್ತಿದ್ದೇನೆ. ನಾವು ಸದರಿ ಆಸ್ತಿಗೆ ಸಂಬಂಧಪಟ್ಟಂತೆ 2011 ಕ್ಕಿಂತ ಮುಂಚೆ ಯಾವುದೇ ಟ್ಯಾಕ್ಸ ಕಟ್ಟಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಅದನ್ನು ಕೈಯಿಂದ ಬರೆದುಕೊಟ್ಟಿದ್ದೇನೆ. ಕೈಯಿಂದ ಬರೆದುಕೊಟ್ಟಿದ್ದನ್ನು ವಕೀಲರು ಹಾಜರುಮಾಡಿದ್ದರೋ ಇಲ್ಲವೋ ನಾನು ಕೇಳಿಲ್ಲ. 2011 ರ

ಪೆಬ್ರುವರಿ ನಂತರದಲ್ಲಿ ವಾದಿ ಹೆಸರು  ಉತಾರದಲ್ಲಿ ಆಗಿದೆ ಎಂದರೆ ಸಾಕ್ಷಿ ನಂತರದಲ್ಲಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.  2020 ರಲ್ಲಿ ಈ ವಿಚಾರ ನನಗೆ ಗೊತ್ತಾಯಿತು. ಆಗ ನಾನು ಟ್ಯಾಕ್ಸ ತುಂಬಲು ಹೋಗಿದ್ದೆ. ನಾನು ಮತ್ತುನನ್ನ ಗಂಡ ಈ ವಿಚಾರ ಗೊತ್ತಾದ ಮೇಲೆ ಸದರಿ ಖರೀದಿ ಪತ್ರದ ವ್ಯವಹಾರದ ಬಗ್ಗೆ ಪಂಚಾಯತಿ ಅಧಿಕಾರಿಗಳ ವಿರುದ್ದ ದೂರು ಕೊಟ್ಟಿಲ್ಲ. ವಾದಿ ಸದರಿ ಆಸ್ತಿಗೆ  ಟ್ಯಾಕ್ಸ ತುಂಬಿದ್ದಾ ಎಂದರೆ ಇರಬಹುದು. ಸಾಕ್ಷಿ ಸುಳ್ಳು ಸೃಷ್ಟಿ ಮಾಡಿದ್ದಾಗಿ ಹೇಳುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಏನು ಬರೆಸಿಲ್ಲ, ನನಗೆ ಏನು ಗೊತ್ತಿಲ್ಲ. ದಿನಾಂಕ 25/02/2011 ರಲ್ಲಿ ನನ್ನ ಗಂಡ ರೂ.72,000/-  ಕ್ಕೆ ಸದರಿ  ಜಾಗವನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ಎಲ್ಲಾ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.